**CC 2986/2022**

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಗಳ ನ್ಯಾಯಾಲಯ, ಹೊಸಪೇಟೆ.**

**ಸಿಸಿ ನಂಬರ್ 2986/2022**

**ಸಿ ಡಬ್ಲೂ -1**
**ಪಿ ಡಬ್ಲೂ -1**

| | |
|---|---|
| **ಸಾಕ್ಷಿಯ ಹೆಸರು -** | **ಮಣಿಮಾರನ್** |
| **ತಂದೆಯ ಹೆಸರು -** | **ತಿಮ್ಮರಾಯಪ್ಪ** |
| **ವಯಸ್ಸು -** | **77 ವರ್ಷಗಳು** |
| **ಉದ್ಯೋಗ -** | **ನಿವೃತ್ತ ಆರಕ್ಷಕ ನಿರೀಕ್ಷಕ, ಹಾಲಿ ಇ ಆಯ್ ಪಿ ಆರ್ ಸಂಸ್ಥೆಯ ಹಿರಿಯ ವ್ಯವಸ್ಥಾಪಕ** |
| **ವಾಸಸ್ಥಳ -** | **ಕಂಚಿ, ತಮಿಳುನಾಡು** |

**ಸಾಕ್ಷಿಯನ್ನು ದಿನಾಂಕಃ 01-08-2025 ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎ. ಪಿ. ಪಿ. ಅವರಿಂದ**

ದಿಃ **20-04-2022** ರಂದು ಹೊಸಪೇಟೆ ಪಟ್ಟಣದ ಇ ಆರ್ ಡಿ ಕಂಪನಿಯ ಬ್ಯಾಟರಿ ಮತ್ತು ಚಾರ್ಜರ್ ಗಳನ್ನು ನಕಲು ಮಾಡಿ ಮಾರಾಟ ಮಾಡುತ್ತಿದದ್ದು ಗೊತ್ತಾಯಿತು. ನಾನು ಹೊಸಪೇಟೆ ಪಟ್ಟಣದ ಅಂಗಡಿಗಳ ಸರ್ವೆ ಮಾಡಿರುತ್ತೇನೆ. ನಂ. **341** ಆಶಾಪುರ ಮೊಬೈಲ್ ಶಾಪ್, ಕೃಪಾಕರ ಬಿಲ್ಡಿಂಗ್, ರಾಣಿಪೇಟೆ, ಹೊಸಪೇಟೆಯಲ್ಲಿ ಇ ಆರ್ ಡಿ ಕಂಪನಿಯ ನಕಲಿ ಬ್ಯಾಟರಿ ಮತ್ತು ಚಾರ್ಜರ್ ಗಳು ಮಾರಾಟ ಆಗ್ತುತ್ತಿವೆ ಎಂದು ಕಂಡು ಬಂದಿತ್ತು. ನಾನು ಈ ಸಂಬಂಧ ಹೊಸಪೇಟೆ ಪಟ್ಟಣ ಪೋಲಿಸ ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ.

ಸದರಿ ದೂರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ದೂರು ನೋಡಿ ಗುರುತಿಸಿದ್ದು, ಅದನ್ನು ನಿಪಿಃ **1** ಎಂದು, ಸಾಕ್ಷಿಯ ಸಹಿಯನ್ನು ನಿಪಿಃ **1 (ಎ)** ಎಂದು ಗುರುತಿಸಲಾಯಿತು.

ಸದರಿಯವರು ಪ್ರಕರಣ ದಾಖಲಿಸಿಕೊಂಡು ದಿಃ **21-04-2022** ರಂದು ಬೆಳಿಗ್ಗೆ **10.30** ಗಂಟೆಗೆ ಠಾಣೆಗೆ ಬರುವಂತೆ ತಿಳಿಸಿದ್ದರು. ನಾನು **10.30** ಗಂಟೆಗೆ ಠಾಣೆಗೆ ಹೋಗಿದ್ದೆ. ನಾನು, ಚಾಸಾ **-12** ಮತ್ತು **9** ರವರು ಇಲಾಖಾ ಜೀಪ್ ನಲ್ಲಿ ಸದರಿ ಮೇಲೆ ಹೇಳಿದ ಅಂಗಡಿಗೆ ಹೋದೆವು. ಸದರಿ ಅಂಗಡಿಯಲ್ಲಿ ಇದ್ದ ಇಬ್ಬರು ವ್ಯಕ್ತಿಗಳನ್ನು ವಿಚಾರಿಸಿದಾಗ ಅವರು ತಮ್ಮ ಹೆಸರುಗಳನ್ನು ಕುಲದೀಪ್ ಮತ್ತು ಮಹಾದೇವ ಎಂದು ತಿಳಿಸಿದರು. ಸದರಿಯವರು ತಾವು ಸಿಬಬಂದಿಗಳಾಗಿದ್ದು, ಆ ಅಂಗಡಿಯ ಮಾಲೀಕ ಮನೋಹರ ರವರು ಮದುವೆಗೆ ಹೋಗಿರುತ್ತಾರೆ ಎಂದು ತಿಳಿಸಿದರು.

ನಾನು ಸದರಿ ಅಂಗಡಿಯಲ್ಲಿದ್ದ ಇ ಆರ್ ಡಿ ಕಂಪನಿಯ ಬ್ಯಾಟರಿ ಮತ್ತು ಚಾರ್ಜರ್ ಗಳನ್ನು ಗುರುತಿಸಿದೆ. ಸದರಿ ನಕಲಿ ಬ್ಯಾಟರಿ ಮತ್ತು ಚಾರ್ಜರ್ ಗಳನ್ನು ಚಾಸಾ **-12** ರವರ ಮುಂದೆ ಹಾಜರುಪಡಿಸಿದ್ದೆ. ಒಟ್ಟು **8** ಬಾಕ್ಸ್ ಗಳು ಇದ್ದವು. ಬಾಕ್ಸ್ ಗಳಲ್ಲಿ ತಲಾ **10, 11, 1, 1, 22, 12, 2** ಒಟ್ಟು **70** ಚಾರ್ಜರ್ ಮತ್ತು ಒಂದು ಅಡಾಪ್ಟರ್ ಇದ್ದವು. ಸ್ಥಳದಲ್ಲಿಯೇ ಚಾಸಾ **-12** ರವರು ಚಾಸಾ **-2** ಮತ್ತು **3** ರವರ ಸಮಕ್ಷಮ ಪಂಚನಾಮೆ ಮಾಡಿ ಅವುಗಳನ್ನು ಜಪ್ತು ಪಡಿಸಿಕೊಂಡರು. ಸದರಿ ಪಂಚನಾಮೆಗೆ ನಾನು ಸಹಿ ಮಾಡಿರುತ್ತೇನೆ. ಸಾಕ್ಷಿ ಪಂಚನಾಮೆಯಲ್ಲಿನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಪಂಚನಾಮೆಯನ್ನು ನಿಪಿಃ **2** ಎಂದು, ಸಾಕ್ಷಿಯ ಸಹಿಯನ್ನು ನಿಪಿಃ **2 (ಎ)** ಎಂದು ಗುರುತಿಸಲಾಯಿತು. ಪೋಲಿಸರು ನನ್ನ ವಿಚಾರಿಸಿ ನನ್ನ ಹೇಳಿಕೆ ಪಡೆದಿರುತ್ತಾರೆ. ಪೇಟೋಗಳನ್ನು ತೆಗೆದಿರುತ್ತಾರೆ. ಸಾಕ್ಷಿ **22** ಪೋಟೋಗಳನ್ನು ನೋಡಿ ಗುರುತಿಸಿದ್ದು, ಸದರಿ ಪೋಟೋಗಳನ್ನು ಒಟ್ಟಾಗಿ ನಿಪಿಃ **3** ಎಂದು ಗುರುತಿಸಲಾಯಿತು. ಪಂಚನಾಮೆ ಅಡಿಯಲ್ಲಿ ಜಪ್ತು ಪಡಿಸಿಕೊಂಡಿದ್ದ ಚಾರ್ಜರ್ ಮತ್ತು ಅಡಾಪ್ಟರ್ ನೋಡಿದರೆ ಗುರುತಿಸುತ್ತೇನೆ.

**ಸಿ ಡಬ್ಲೂ -1**
**ಪಿ ಡಬ್ಲೂ -1**

ಸಾಕ್ಷಿ ನ್ಯಾಯಾಲಯದ ಮುಂದಿರುವ 4 ಬಾಕ್ಸ ನಲ್ಲಿರುವ ಚಾರ್ಜರ್ ಕೇಬಲ್ ಮತ್ತು ಅಡಾಪ್ಟರ್ ಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಒಟ್ಟಾಗಿ ಮು ಮಾ 1 ಎಂದು ಗುರುತಿಸಲಾಯಿತು.

ಸಾಕ್ಷಿ ಇ ಆಯ್ ಪಿ ಆರ್ ಕಂಪನಿಯವರು ನೀಡಿರುವ ದಿಃ **01-04-2022** ರ ಪ್ರಮಾಣ ಪತ್ರ ದಿಃ **18-08-2010** ರ ನೇಮಕಾತಿ ಪತ್ರಗಳನ್ನು ನೋಡಿ ಗುರುತಿಸಿರುತ್ತಾರೆ. ಅವುಗಳನ್ನು ನಿಪಿಃ 4 ಮತ್ತು 5 ಎಂದು ಗುರುತಿಸಲಾಯಿತು. ಸಾಕ್ಷಿ ಇ ಆಯ್ ಪಿ ಆರ್ ಕಂಪನಿಯವರು ನೀಡಿರುವ ದಿಃ **08-07-2015** ರ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿರುತ್ತಾರೆ. ಅದನ್ನು ನಿಪಿಃ 6 ಎಂದು ಗುರುತಿಸಲಾಯಿತು. ಸಾಕ್ಷಿ ಪೋಲಿಸರಿಗೆ ನೀಡಿದ್ದ ಪ್ರಮಾಣ ಪತ್ರ ಮತ್ತು ಇ ಆಯ್ ಪಿ ಆರ್ ಕಂಪನಿಯವರ ಟ್ರೇಡ್ ಮಾರ್ಕ ಪ್ರಮಾಣ ಪತ್ರ ಮತ್ತು ಅಧಿಕಾರ ಪತ್ರಗಳನ್ನು ನೋಡಿ ಗುರುತಿಸಿರುತ್ತಾರೆ. ಅಧಿಕಾರ ಪತ್ರ, ಕಾಪಿ ರೈಟ್ ಪ್ರಮಾಣ ಪತ್ರಗಳನ್ನು ನೋಡಿ ಗುರುತಿಸಿರುತ್ತಾರೆ. ಅವುಗಳನ್ನು ಕ್ರಮವಾಗಿ ನಿಪಿಃ 7 ರಿಂದ 10 ರಿಂದ ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎನ್ ಎಸ್ ಹೆಚ್., ವಕೀಲರಿಂದ-**

ದೂರನ್ನು ನಾನೇ ತಯಾರಿಸಿರುತ್ತೇನೆ. ದೂರನ್ನು ಹೊಸಪೇಟೆ ಪಟ್ಟಣದಲ್ಲಿಯೇ ತಯಾರಿಸಿರುತ್ತೇನೆ. ದೂರನ್ನು ತಯಾರಿಸುವುದಕ್ಕೂ ಮೊದಲು ನನ್ನ ಮೇಲಾಧಿಕಾರಿಗಳಿಂದ ಅನುಮತಿ ಪಡೆದಿದ್ದೆ. ಮೇಲಾಧಿಕಾರಿಗಳು ನೀಡಿದ್ದ ಆದೇಶವನ್ನು ನಾನು ಹಾಜರುಪಡಿಸಿಲ್ಲ. ಸಾಕ್ಷಿ ಮುಂದುವರೆದು ದೂರವಾಣಿಯ ಮೂಲಕ ಮೌಖಿಕ ಅನುಮತಿಯನ್ನು ಪಡೆದಿದ್ದೆ ಎಂದು ನುಡಿಯುತ್ತಾರೆ. ನಿಪಿಃ 1 ರಲ್ಲಿನ ಲೆಟರ್ ಪ್ಯಾಡ್ ಖಾಲಿ ಇತ್ತು ಅಂದರೆ ಸರಿ. ಖಾಲಿ ಇದ್ದ ಲೆಟರ್ ಪ್ಯಾಡ್ ನಲ್ಲಿ ಟೈಪ್ ಮಾಡಿಸಿರುತ್ತೇನೆ ಅಂದರೆ ಸರಿ.

ಸದರಿ ಲೆಟರ್ ಪ್ಯಾಡ್ ನಲ್ಲಿ ದಿನಾಂಕ ಖಾಲಿ ಬಿಡಲಾಗಿತ್ತು ಅಂದರೆ ಸರಿ. ನನ್ನ ಮೇಲಾಧಿಕಾರಿಗಳು ಇದೇ ರೀತಿಯ ಖಾಲಿ ಲೆಟರ್ ಪ್ಯಾಡ್ ಗಳನ್ನು ನಮಗೆ ಕೊಡುತ್ತಾರೆ ಅಂದರೆ ಸರಿ. ಮೇಲಾಧಿಕಾರಿಗೆ ಇಂತಹ ಅಂಗಡಿಗೆ ಹೋಗುತ್ತಿದ್ದೇವೆ ಎಂದು ತಿಳಿಸಿ ಲೆಟರ್ ನ್ನು ಪಡೆಯುವುದಿಲ್ಲ. ಹೊಸಪೇಟೆಯಲ್ಲಿ ಆ ದಿನ ಒಟ್ಟು ಎಷ್ಟು ಅಂಗಡಿಗಳನ್ನು ಪರಿವೀಕ್ಷಿಸಿದ್ದೇವು ಎಂದು ನನಗೆ ನೆನಪಿಲ್ಲ. ನನಗೆ ಬೇರೆ ಯಾವುದೇ ಅಂಗಡಿಯ ಹೆಸರು ನನಗೆ ನೆನಪಿಲ್ಲ. ದೂರಿನಲ್ಲಿ ಯಾವ ಯಾವ ಅಂಗಡಿಗೆ ಹೋಗಿದ್ದೆ ಎಂದು ಬರೆದಿಲ್ಲ ಅಂದರೆ ಸರಿ.

ಅಂಗಡಿಗಳಿಗೆ ಹೋದಾಗ ಸದರಿ ಉತ್ಪನ್ನಗಳನ್ನು ಎಲ್ಲಿಂದ ತಂದಿರುತ್ತಾರೆ ಎಂದು ಮಾಲೀಕರಿಗೆ ಪ್ರಶ್ನಿಸಿರುವುದಿಲ್ಲ ಮತ್ತು ಅದರ ದಾಖಲೆಗಳನ್ನು ನಾನನು ಪರಿಶೀಲಿಸಿರುವುದಿಲ್ಲ. ಸದರಿ ಅಂಗಡಿಗೆ ಸಂಬಂಧಿಸಿದ ಯಾವುದೇ ಲೆಕ್ಕ ಪುಸ್ತಕಗಳನ್ನು ನಾನು ಪರಿಶೀಲಿಸಿರುವುದಿಲ್ಲ. ನಮಗೆ ತರಬೇತಿ ನೀಡಿದ್ದರಿಂದ ಯಾವ ಉತ್ಪನ್ನ ನಕಲಿ ಮತ್ತು ಯಾವುದು ಅಸಲಿ ಎಂದು ಗುರುತು ಹಿಡಿಯಲು ಆಗುತ್ತದೆ. ತರಬೇತಿ ಪಡೆದ ಬಗ್ಗೆ ನನಗೆ ಪ್ರಮಾಣ ಪತ್ರ ನೀಡಿರುತ್ತಾರೆ. ನಾನು 1 ವಾರದ ತರಬೇತಿಯನ್ನು ಪಡೆದಿದ್ದೆ. ಸದರಿ ತರಬೇತಿ ಪಡೆದ ಬಗ್ಗೆ ಪ್ರಮಾಣ ಪತ್ರವನ್ನು ಪೋಲಿಸರಿಗೆ ನೀಡಿಲ್ಲ.

ಜಪ್ತು ಪಡಿಸಿಕೊಂಡ ಉತ್ಪನ್ನಗಳ ಮೇಲೆ ಕ್ರಮ ಸಂಖ್ಯೆಯನ್ನು ಬರೆಯಲಿಲ್ಲ. ದೂರಿನಲ್ಲಿ ಎಷ್ಟು ಉತ್ಪನ್ನಗಳು ನಕಲಿ ಇರುತ್ತವೆ ಎಂದು ನಮೂದು ಆಗಿಲ್ಲ. ನಕಲಿ ಉತ್ಪನ್ನಗಳು ಎಂದು ಹೇಳಿರುವ ಮು ಮಾ ಗಳ ಬ್ಯಾಚ್ ನಂಬರ್ ಗಳನ್ನು ದೂರಿನಲ್ಲಾಗಲಿ, ಪಂಚನಾಮೆಯಲ್ಲಾಗಲಿ ಬರೆದಿರುವುದಿಲ್ಲ. ಪೋಟೋಗಳನ್ನು ಪೋಲಿಸರೇ ತೆಗೆದಿರುತ್ತಾರೆ. ಪೋಟೋ ತೆಗೆದಾಗ ನನ್ನೊಂದಿಗೆ ಬೇರೆ ಯಾರು ಇರಲಿಲ್ಲ. ಪೋಟೋ ತೆಗೆಯಲು ಬಳಸಿದ ಕ್ಯಾಮರಾ ಯಾವ ಕಂಪನಿಯದ್ದು ಎಂದು ನನಗೆ ಗೊತ್ತಿಲ್ಲ.

**CC 2986/2022**

**ಸಿ ಡಬ್ಲ್ಯೂ -1**
**ಪಿ ಡಬ್ಲ್ಯೂ -1**

ಪಂಚನಾಮೆಯನ್ನು ಅಂಗಡಿಯಲ್ಲಿಯೇ ಬರೆಯಲಾಗಿತ್ತು. ಪಂಚನಾಮೆಯನ್ನು ಅಂಗಡಿಯ ಹೊರಗಡೆ ಕುಳಿತು ಬರೆಯಲಾಗಿತ್ತು. ಪಂಚರನ್ನು ಪೋಲಿಸರೇ ಕರೆದುಕೊಂಡು ಬಂದಿದ್ದರು. ಪಂಚನಾಮೆಯನ್ನು ಪೋಲಿಸರು ಕೈಯಲ್ಲಿ ಬರೆದಿರುತ್ತಾರೆ.

ಈಗ ನಾನು ನೋಡುತ್ತಿರುವ ಬಿಲ್ ಇ ಆರ್ ಡಿ ಕಂಪನಿಯ ಬಿಲ್ ಆಗಿರುತ್ತದೆ ಅಂದರೆ ಸರಿ. ನಿಪಿಃ 7 ರ ಪ್ರಮಾಣ ಪತ್ರ ನನ್ನ ಮೇಲಾಧಿಕಾರಿ ನೀಡಬೇಕಾಗಿತ್ತು ಅಂದರೆ ಸರಿ. ಆರೋಪಿ ಯಾವುದೇ ನಕಲಿ ಉತ್ಪನ್ನಗಳನ್ನು ಮಾರಾಟ ಮಾಡುತ್ತಿರಲಿಲ್ಲ ಅಂದರೆ ಸರಿಯಲ್ಲ. ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಇ ಆರ್ ಡಿ ಕಂಪನಿಯವರಿಗೆ ನಮ್ಮ ಕಂಪನಿಯಿಂದ ನಾವು ತನಿಖೆ ಮಾಡಿ ಪ್ರಕರಣಗಳನ್ನು ದಾಖಲಿಸಿರುತ್ತೇವೆ ಎಂದು ಅಂಕಿ ಅಂಶಗಳನ್ನು ತೋರಿಸಲು ಈ ಪ್ರಕರಣ ದಾಖಲಿಸಿರುತ್ತೇನೆ ಅಂದರೆ ಸರಿಯಲ್ಲ. ಇ ಆರ್ ಡಿ ಕಂಪನಿಯವರು ನನ್ನ ಪರವಾಗಿ ಯಾವುದೇ ಪ್ರಮಾಣ ಪತ್ರ ನೀಡಿಲ್ಲ ಮತ್ತು ನಾನು ಯಾವುದೇ ದಾಖಲೆಗಳನ್ನು ಪೋಲಿಸರಿಗೆ ನೀಡಿಲ್ಲ ಅಂದರೆ ಸರಿಯಲ್ಲ.

**ನ್ಯಾಯಾಲಯದ ಪ್ರಶ್ನೆಃ** ನೀವು ಅಸಲಿ ಚಾರ್ಜರ್ ಅಥವಾ ಬ್ಯಾಟರಿಯನ್ನು ತನಿಖಾಧಿಕಾರಿಗೆ ದೂರು ನೀಡುವಾಗ ಅಥವಾ ದೂರು ನೀಡಿದ ನಂತರ ನೀಡಿರುತ್ತೀರಾ ?

**ಸಾಕ್ಷಿ ಉತ್ತರಃ** ಇಲ್ಲಾ.

ಮರುವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ., ಹೊಸಪೇಟೆ.